"ಮಧುರ ಮಕ್ಕಳೇ - ಯಾವುದೇ ಕರ್ಮ ವಿಕರ್ಮವಾಗದಂತೆ ತಮ್ಮನ್ನು ತಾವು ಕಾಪಾಡಿಕೊಳ್ಳಬೇಕು, ಹೆಜ್ಜೆ-ಹೆಜ್ಜೆಯಲ್ಲಿ ತಂದೆಯ ಶ್ರೀಮತವನ್ನು ಪಡೆದು ಕರ್ಮದಲ್ಲಿ ಬರಬೇಕು"

ಪ್ರಶ್ನೆ: ವಿಕರ್ಮಗಳಿಂದ ಯಾರು ರಕ್ಷಿಸಿಕೊಳ್ಳುತ್ತಾರೆ? ತಂದೆಯ ಸಹಾಯ ಯಾರಿಗೆ ಸಿಗುತ್ತದೆ?

ಉತ್ತರ: ಯಾರು ಸದಾ ತಂದೆಯ ಜೊತೆ ಸತ್ಯವಾಗಿರುತ್ತಾರೆ, ಪ್ರತಿಜ್ಞೆ ಮಾಡಿ ವಿಕಾರಗಳ ದಾನ ಕೊಟ್ಟು, ಮತ್ತೆ ಹಿಂತಿರುಗಿ ಪಡೆಯುವ ಸಂಕಲ್ಪ ಮಾಡುವುದಿಲ್ಲ. ಅವರು ವಿಕರ್ಮದಿಂದ ರಕ್ಷಿಸಿಕೊಳ್ಳುತ್ತಾರೆ. ಯಾರು ಕರ್ಮ-ವಿಕರ್ಮವಾಗುವ ಮೊದಲೇ ತಂದೆಯಿಂದ ಸಲಹೆ ಪಡೆಯುತ್ತಾರೆ, ಅವರಿಗೆ ತಂದೆಯ ಸಹಯೋಗ ಸಿಗುತ್ತದೆ. ಸಾಕಾರ ತಂದೆಗೂ ತಮ್ಮ ಸತ್ಯ-ಸತ್ಯ ಸಮಾಚಾರವನ್ನು ಹೇಳುತ್ತಾರೆ. ಮಕ್ಕಳೇ ವೈದ್ಯನ ಮುಂದೆ ಎಂದಿಗೂ ತಮ ಕಾಯಿಲೆಯನ್ನು ಬಚ್ಚಿಟ್ಟುಕೊಳ್ಳಬಾರದು, ಪಾಪಗಳನ್ನು ಬಚ್ಚಿಟ್ಟುಕೊಂಡರೆ ವೃದ್ಧಿ ಆಗುತ್ತಿರುತ್ತದೆ, ಇದರಿಂದ ಪದವಿ ಭ್ರಷ್ಟರಾಗಿ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ತಂದೆ ತಿಳಿಸುತ್ತಾರೆ.

ಗೀತೆ: ಬಾಲ್ಯದ ದಿನಗಳನ್ನು ಮರೆಯಬಾರದು........

ಓಂ ಶಾಂತಿ. ಮಕ್ಕಳು ಹಾಡನ್ನು ಕೇಳಿದರು, ತಂದೆಯು ಮಕ್ಕಳಿಗೆ ಎಚ್ಚರಿಕೆಯನ್ನು ಕೊಡುತ್ತಾರೆ-ಹೇ ಮಕ್ಕಳೇ ಈಗ ನೀವು ಈಶ್ವರನ ಮಕ್ಕಳಾಗಿದ್ದೀರಿ ಹಾಗೂ ನಾವು ಈಶ್ವರನ ಸಂತಾನರೆಂದು ತಿಳಿದುಕೊಂಡಿದ್ದೀರಿ. ಅವರು ಪರಮಪಿತ ಪರಮಾತ್ಮ ಆಗಿರುವರೆಂದು ಇಡೀ ಪ್ರಪಂಚ ಮಾನ್ಯತೆ ಮಾಡುತ್ತದೆ. ತಂದೆ ಅರ್ಥಾತ್ ನಾವು ಅವರ ಸಂತಾನರಾಗಿದ್ದೇವೆ. ಪರಮಪಿತ ಪರಮಾತ್ಮನೆಂದಾಗ ಮಕ್ಕಳು ಇರಬೇಕಲ್ಲವೇ. ನೀವು ಲೌಕಿಕ ತಂದೆಗಂತೂ ಮಕ್ಕಳಾಗಿದ್ದೀರಿ. ಈಗ ಪಾರಲೌಕಿಕ ತಂದೆಗೆ ಮಕ್ಕಳಾಗಿರುವಿರಿ. ಏಕೆ? ಬೇಹದ್ದಿನ ತಂದೆಯಿಂದ ಬೇಹದ್ದಿನ ಸುಖದ ಆಸ್ತಿಯನ್ನು ಪಡೆಯುವ ಸಲುವಾಗಿ ತಂದೆಗೆ ಮಕ್ಕಳಾಗಿದ್ದೇವೆ. ತಂದೆ ಸ್ವರ್ಗದ ರಚಯಿತ, ಸ್ವರ್ಗದಲ್ಲಿ ಅಗತ್ಯವಾಗಿ ದೇವತೆಗಳ ರಾಜ್ಯವಿರಬೇಕು. ಇದನ್ನು ತಿಳಿದುಕೊಂಡು ಪಾರಲೌಕಿಕ ತಂದೆಗೆ ಮಕ್ಕಳಾಗಿದ್ದೀರಿ. ಒಂದುವೇಳೆ ರಾಜನಿಗೆ ಮಕ್ಕಳಿಲ್ಲದಾಗ ದತ್ತು ತೆಗೆದುಕೊಳ್ಳುತ್ತಾರೆ, ಅವರು ಶ್ರೀಮಂತರ ಮಕ್ಕಳನ್ನೇ ದತ್ತು ತೆಗೆದುಕೊಳ್ಳುತ್ತಾರೆ ವಿನಃ ಬಡವರ ಮಕ್ಕಳನ್ನು ದತ್ತು ತೆಗೆದುಕೊಳ್ಳುವುದಿಲ್ಲ. ಏನಾದರೂ ಲಾಭವಿದ್ದಾಗ ದತ್ತು ತೆಗೆದುಕೊಳ್ಳುತ್ತಾರೆ. ಅದೇ ರೀತಿ ನಾವು ಈಶ್ವರನ ಮಕ್ಕಳಾದರೆ ಈಶ್ವರನಿಂದ ಸ್ವರ್ಗದ ರಾಜ್ಯಭಾಗ್ಯ ಪ್ರಾಪ್ತಿಯಾಗುವುದೆಂದು ತಿಳಿದುಕೊಂಡಿದ್ದೀರಿ. ಹಾಗಾದರೆ ಇಂತಹ ತಂದೆಯನ್ನು ಎಂದಿಗೂ ಮರೆಯದೆ ಅವರ ಶ್ರೀಮತದಂತೆ ನಡೆಯಬೇಕು. ಏಕೆಂದರೆ ರಾವಣನ ಮತದಂತೆ ವಿಕರ್ಮ ಮಾಡುತ್ತೀರಿ, ಆದುದರಿಂದ ಈ ಪಂಚ ವಿಕಾರಗಳಿಗೆಂದೂ ಸಹ ವಶವಾಗಬಾರದು. ಎಲ್ಲಿಯಾದರೂ ಮೋಸ ಹೋಗುತ್ತೇನೆಂದು ನೋಡಿಕೊಂಡು ತಕ್ಷಣ ತಂದೆಯಿಂದ ಸಲಹೆಯನ್ನು ತೆಗೆದುಕೊಳ್ಳಬೇಕು. ಕರ್ಮ ವಿಕರ್ಮವಾಗುವ ಮೊದಲೇ ಬಾಬಾ ನಾವು ಇದನ್ನು ಮಾಡಬಹುದೇ ಎಂದು ಕೇಳಬೇಕು. ಹೀಗೆ ಎಂದಿಗೂ ದೇಹಾಭಿಮಾನದಲ್ಲಿ ಬರಬಾರದೆಂದು ತಿಳಿಸಿಕೊಡುತ್ತಾರೆ. ತಮ್ಮನ್ನು ಆತ್ಮನೆಂದು ತಿಳಿದು ಪರಮಪಿತ ಪರಮಾತ್ಮನ ಮತದಂತೆ ಹೆಜ್ಜೆ-ಹೆಜ್ಜೆಯಲ್ಲಿ ನಡೆಯಬೇಕು. ಒಂದುವೇಳೆ ಯಾವುದಾದರೂ ಮಾತು ತಿಳಿಯದಿದ್ದರೆ ತಂದೆಯನ್ನು ಕೇಳಿ ತಿಳಿದುಕೊಳ್ಳಬೇಕು. ಬಿರುಗಾಳಿಯಂತು ಬಹಳ ಬರುವುದು, ಆದರೆ ತಮ್ಮನ್ನು ತಾವು ಕಾಪಾಡಿಕೊಳ್ಳಬೇಕು. ವಿಷದಲ್ಲಿ ಬಿದ್ದರೆ ಬೇಹದ್ದಿನ ತಂದೆಯನ್ನು ಮರೆತು ಮುಖವನ್ನು ಕಪ್ಪು ಮಾಡಿಕೊಳ್ಳುತ್ತೀರಿ. ತಂದೆಯು ನಿಮ್ಮನ್ನು ಪಾವನರನ್ನಾಗಿ ಮಾಡಲು ಬಂದಿದ್ದಾರೆ. ಆದುದರಿಂದ ಈ ಪಂಚ ವಿಕಾರಗಳ ಬಂಧನದಲ್ಲಿ ಎಂದಿಗೂ ಬಂಧಿಸಿಕೊಳ್ಳಬಾರದು. ದೇಹಾಭಿಮಾನದಲ್ಲಿ ಬರುವ ಕಾರಣ ಪಂಚ ವಿಕಾರಗಳಲ್ಲಿ ಬಂಧಿಸಲ್ಪಡುತ್ತೀರಿ. ದೇಹೀ-ಅಭಿಮಾನಿ ಆದಾಗ ತಂದೆಯ ಭಯವಿರುತ್ತದೆ. ವಿಕಾರದಲ್ಲಿ ಹೋಗುವುದರಿಂದ ದೊಡ್ಡ ವಿಕರ್ಮವಾಗುತ್ತದೆ. ಏಕೆಂದರೆ ನೀವು ವಿಕಾರಗಳ ದಾನ ಮಾಡಿದ್ದೀರಿ. ಒಂದುವೇಳೆ ವಿಕಾರಗಳನ್ನು ದಾನ ಮಾಡಿ ಮತ್ತೆ ಹಿಂತಿರುಗಿ ಪಡೆದರೆ ಹರಿಶ್ಚಂದ್ರನ ಸ್ಥಿತಿಯನ್ನು ಪಡೆಯಬೇಕಾಗುತ್ತದೆ. ಇಲ್ಲಿ ಹಣದ ಮಾತೇನಿಲ್ಲ. ಇದು ಪಂಚ ವಿಕಾರಗಳನ್ನು ದಾನ ಮಾಡುವ ಮಾತಾಗಿದೆ. ನಿಮ್ಮ ಬಳಿ ಇರುವ ಮುಳ್ಳುಗಳನ್ನು ದಾನ ಕೊಟ್ಟು ಮತ್ತೆಂದಿಗೂ ಕರ್ಮದಲ್ಲಿ ಬಾರದಂತೆ ನೋಡಿಕೊಳ್ಳಬೇಕು. ಒಂದುವೇಳೆ ಹಿಂತಿರುಗಿ ಪಡೆಯಬೇಕೆಂದರೆ ಮೊದಲೇ ತಂದೆಗೆ ತಿಳಿಸಬೇಕು. ತಂದೆಗೆ ತಿಳಿಸದಿದ್ದರೆ ಅದು ಇನ್ನೂ ವೃದ್ಧಿ ಆಗುತ್ತಿರುತ್ತದೆ. ಮತ್ತೆ-ಮತ್ತೆ ವಿಕಾರದಲ್ಲಿ ಹೋಗುತ್ತಿರುತ್ತಾರೆ. ತಂದೆಗೆ ಸತ್ಯ ಹೇಳುವದರಿಂದ ಸಹಯೋಗ ಸಿಗುತ್ತದೆ. ನಾವು ಶಿವತಂದೆಯ ಮಕ್ಕಳಾಗಿದ್ದೇವೆ. ಎಂದಿಗೂ ಸೋಲುವುದಿಲ್ಲವೆಂದು ತಂದೆಯ ಜೊತೆ ಪ್ರತಿಜ್ಞೆ ಮಾಡಿದ್ದೇವೆ. ಇದು ಪಂಚ ವಿಕಾರಗಳೆಂಬ ಶತ್ರುವಿನೊಂದಿಗೆ ವಿಜಯಿಗಳಾಗುವ ಬಾಕ್ಸಿಂಗ್ ಆಗಿದೆ. ಈ ಯುದ್ಧದಲ್ಲಿ ತಂದೆ ಎಂದಿಗೂ ನಮ್ಮನ್ನು ಸೋಲುವಂತೆ ಮಾಡುವುದಿಲ್ಲ. ಒಂದುವೇಳೆ ಶಿವ ತಂದೆಗೆ ಹೇಳಿದರೆ ಸಲಹೆ ಸಿಗುತ್ತದೆ. ಶಿವ ತಂದೆಯಿಂದ ಸಿಗುವ ಸಲಹೆಯನ್ನು ಸಾಕಾರ ತಂದೆಗೂ ತಿಳಿಸಬೇಕು. ತಿಳಿಸದಿದ್ದರೆ ಹಾಗೆಯೇ ವೃದ್ಧಿ ಆಗುತ್ತದೆ. ಆಗ ನೂರು ಪಟ್ಟು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ತಂದೆಗೆ ಸತ್ಯವನ್ನು ಹೇಳುವುದರಿಂದ ಅರ್ಧ ಕ್ಷಮಿಸುತ್ತಾರೆ. ಈ ರೀತಿ ಅನೇಕ ಮಕ್ಕಳು ನಾಚಿಕೆಯಿಂದ ತಂದೆಗೆ ಸಮಾಚಾರವನ್ನು ಕೊಡುವುದಿಲ್ಲ. ಹೇಗೆ ಕಠಿನವಾದ ಕಾಯಿಲೆ ಇದ್ದಾಗ ವೈದ್ಯರ ಬಳಿ ಹೇಳಿಕೊಳ್ಳಲು ಸಂಕೋಚ ಪಡುತ್ತಾರೆ.

ಒಂದುವೇಳೆ ಸಂಕೋಚವಾದರೆ ಸರ್ಜನ್ ಏನು ಮಾಡುತ್ತಾರೆ? ನಂತರ ಆ ರೋಗಿಯ ಸ್ಥಿತಿ ಏನಾಗುತ್ತದೆ? ಕಾಯಿಲೆಯು ಬಹಳ ವೃದ್ಧಿಯಾಗುತ್ತದೆ. ಅದೇ ರೀತಿ ತಂದೆ ಮಕ್ಕಳಿಗೆ ತಿಳಿಸುತ್ತಾರೆ-ಮಕ್ಕಳೇ ಯಾವುದೇ ಪಾಪವನ್ನು ತಂದೆಯಿಂದ ಬಚ್ಚಿಡಬಾರದು. ಬಚ್ಚಿಟ್ಟರೆ ಸಂಪೂರ್ಣವಾಗಿ ಪದವಿ ಭ್ರಷ್ಟವಾಗಿ ಬಿಡುವುದು ಹಾಗೂ ಕಲ್ಪ-ಕಲ್ಪವು ಅಂತಹ ಪದವಿಯೇ ಪ್ರಾಪ್ತಿಯಾಗುವುದು. ನಂತರ ಜ್ಞಾನವನ್ನು ಪಡೆಯಲು ಆಗುವುದಿಲ್ಲ. ಅಂತಹ ಸಮಯದಲ್ಲಿ ತಂದೆಯನ್ನು ಕೇಳುತ್ತಾರೆ-ಬಾಬಾ ಇವರ ಸ್ಥಿತಿ ಏನಾಗುತ್ತದೆ? ಅವರು ಬಹಳ ಶಿಕ್ಷೆಗೆ ಬಾಗಿಯಾಗುತ್ತಾರೆ ಎಂದು ತಂದೆ ತಿಳಿಸುತ್ತಾರೆ. ಅಂತಿಮ ಸಮಯದಲ್ಲಿ ಶಿಕ್ಷೆಯಿಂದ ಲೆಕ್ಕಾಚಾರವೂ ಸಮಾಪ್ತಿ ಆಗುತ್ತದೆ. ಹೇಗೆ ಕಾಶಿಯಲ್ಲಿ ತಮ್ಮನ್ನು ಶಿವನಿಗೆ ತಮ್ಮನ್ನು ಅರ್ಪಣೆ ಮಾಡಿಕೊಳ್ಳುತ್ತಾರೆ. ಸತ್ಯ-ಸತ್ಯವಾಗಿ ಶಿವನಿಗೆ ನೀವು ಅರ್ಪಣೆ ಆಗುತ್ತೀರಿ. ನೀವು ಶಿವ ತಂದೆಯಿಂದ ಆಸ್ತಿಯನ್ನು ಪಡೆಯಲು ಮಕ್ಕಳಾಗಿದ್ದೀರಿ. ಈ ರೀತಿ ಕಾಶಿಯಲ್ಲಿ ತಮ್ಮನ್ನು ಶಿವನಿಗೆ ಅರ್ಪಣೆಯಾಗುವುದು ಆತ್ಮಘಾತ ಮಾಡಿಕೊಳ್ಳುವುದಾಗಿದೆ. ಆದರೆ ಯಾರು ನಿರಂತರ ಭಕ್ತಿ (ನೌದಾ ಭಕ್ತಿ) ಮಾಡಿರುವವರು ಶಿವನಿಗೆ ಅರ್ಪಣೆ ಆಗುವಾಗ ಅವರು ಮಾಡಿರುವ ಪಾಪ ಆ ಸಮಯ ಶಿಕ್ಷೆಯ ರೂಪದಲ್ಲಿ ಸಮಾಪ್ತಿ ಮಾಡಿಕೊಳ್ಳುತ್ತಾರೆ. ಪುನಃ ಜನ್ಮ ಪಡೆದ ನಂತರ ಪಾಪ ಮಾಡುವುದರಿಂದ ಬಿಡುಗಡೆ ಆಗಲು ಸಾಧ್ಯವಿಲ್ಲ. ಯೋಗಾಗ್ನಿಯಿಂದ ಪಾಪ ನಾಶವಾಗುತ್ತದೆ. ಮಾಯೆಯ ರಾಜ್ಯದಲ್ಲಿ ಕರ್ಮ ವಿಕರ್ಮವಾಗುತ್ತದೆ. ಸತ್ಯಯುಗದಲ್ಲಿ ವಿಕರ್ಮವಾಗುವುದಿಲ್ಲ, ಏಕೆಂದರೆ ಅಲ್ಲಿ ಮಾಯೆಯ ರಾಜ್ಯ ಇರುವುದಿಲ್ಲ. ಈಗ ಇಡೀ ಪ್ರಪಂಚ ಭ್ರಷ್ಟಾಚಾರಿಯಾಗಿದೆ. ವಿಕಾರದಲ್ಲಿ ಹೋಗುವುದು ಮೊದಲನೆ ಸ್ಥಾನದ ಭ್ರಷ್ಟಾಚಾರವಾಗಿದೆ. ಜನ್ಮವೂ ಸಹ ಭ್ರಷ್ಟಾಚಾರದಿಂದ ಆಗುತ್ತದೆ, ಅವರು ಪಾಪವನ್ನು ಮಾಡುತ್ತಿರುತ್ತಾರೆ. ಏಕೆಂದರೆ ಇದು ರಾವಣ ರಾಜ್ಯವಾಗಿದೆ. ರಾವಣ ಯಾರು ಆಗಿದ್ದಾನೆಂದು ಯಾರೂ ಸಹ ತಿಳಿದುಕೊಂಡಿಲ್ಲ. ಪಂಚ ವಿಕಾರಿಗಳಿಗೆ ರಾವಣನೆಂದು ಕರೆಯಲಾಗುತ್ತದೆ. ಸ್ವರ್ಗದಲ್ಲಿ ಈ ವಿಕಾರಿಗಳು ಇರುವುದೇ ಇಲ್ಲ, ಆದುದರಿಂದ ಅದನ್ನು ನಿರ್ವಿಕಾರಿ ಪ್ರಪಂಚವೆಂದು ಕರೆಯಲಾಗುವುದು. ಅಲ್ಲಿ ಬೇರೆ ಯಾವ ರಾಜ್ಯ ಅಥವಾ ಖಂಡ ಇರುವುದಿಲ್ಲ. ಇಸ್ಲಾಮಿ ಧರ್ಮ, ಬೌದ್ಧ ಧರ್ಮ ಮೊದಲಾದವರೆಲ್ಲರು ನಂತರ ಬರುತ್ತಾರೆ. ಅವರೂ ಸಹ ಮೊದಲು ಸತೋಪ್ರಧಾನವಾಗಿದ್ದು ನಂತರ ರಜೋ, ತಮೋನಲ್ಲಿ ಬರುತ್ತಾರೆ. ಸತ್ಯ, ತ್ರೇತಾಯುಗದಲ್ಲಿ ಸಂಪೂರ್ಣ ನಿರ್ವಿಕಾರಿಗಳಾಗಿದ್ದರು. ಆಮೇಲೆ ನಿಧಾನ-ನಿಧಾನವಾಗಿ ಸಂಪೂರ್ಣ ವಿಕಾರಿಗಳಾಗುತ್ತಾ ಬರುತ್ತಾರೆ. ಪೂರ್ತಿ ವಿಕಾರಿಯಾಗಲೂ ಸಹ ಸಮಯ ಬೇಕಾಗುವುದು. ಸತ್ಯಯುಗದಲ್ಲಿ ಹದಿನಾರು ಕಲೆ, ನಂತರ ಹದಿನಾಲ್ಕು ಕಲೆ ಹೀಗೆ ಕಲೆಗಳು ಇಳಿಯುತ್ತಾ ಹೋಗುತ್ತದೆ, ಏಕೆಂದರೆ ಇದು ಇಳಿಯುವ ಕಲೆಯಾಗಿದೆ. ಈಗ ನಿಮ್ಮದು ಏರುವ ಕಲೆಯಾಗಿದೆ. ಏರುವ ಕಲೆಯನ್ನು ರಾಮ ಮಾಡುತ್ತಾರೆ, ಇಳಿಯುವ ಕಲೆಯನ್ನು ರಾವಣ ಮಾಡುತ್ತಾನೆ. ಹೇಗೆ ಚಂದ್ರನ ಕಲೆಗಳು ನಿಧಾನ-ನಿಧಾನವಾಗಿ ಕಡಿಮೆಯಾಗುತ್ತದೆ, ಪ್ರಪಂಚವೂ ಸಹ ಅದೇ ರೀತಿಯಾಗಿದೆ. ಈಗ ಎಲ್ಲರೂ ಕಲಾಹೀನರಾಗಿದ್ದಾರೆ. ಇಂತಹ ಸಮಯದಲ್ಲಿ ತಂದೆ ಬಂದು ಪುನಃ ಹದಿನಾರು ಕಲಾಸಂಪನ್ನರಾಗಿ ಮಾಡುತ್ತಾರೆ. ಈ ಆಟ ಎಲ್ಲವೂ ಭಾರತದ ಮೇಲೆ ಮಾಡಲ್ಪಟ್ಟಿದೆ. ಈ ವರ್ಣಗಳೂ ಸಹ ಭಾರತದ ವರ್ಣಗಳಾಗಿವೆ. ಇಲ್ಲವೆಂದರೆ ಎಂಬತ್ತನಾಲ್ಕು ಜನ್ಮಗಳ ಲೆಕ್ಕ ಹೇಗೆ ತಿಳಿಯುತ್ತದೆ? ಇದು ಕಬ್ಬಿಣದ ಯುಗವೆಂದು ತಂದೆ ತಿಳಿಸುತ್ತಾರೆ. ಕಲಿಯುಗದ ಅಂತ್ಯದ ನಂತರ ಸತ್ಯಯುಗ ಆದಿ ಆರಂಭವಾಗುತ್ತದೆ. ಯಾವ ದೇವೀ-ದೇವತಾ ಧರ್ಮದವರು ಧರ್ಮ ಭ್ರಷ್ಟ, ಕರ್ಮ ಭ್ರಷ್ಟವಾಗಿದ್ದಾರೆ, ಅವರು ಪುನಃ ಬರುತ್ತಾರೆ. ಹೇಗೆ ನೀವೂ ಸಹ ಬಂದಿದ್ದೀರಲ್ಲವೆ. ವೃಕ್ಷದ ಅಂತ್ಯದಲ್ಲಿ ಬ್ರಹ್ಮಾ ನಿಂತಿದ್ದಾರೆ, ಅದು ತಮೋಪ್ರಧಾನವಾಗಿದ್ದು ವೃಕ್ಷದ ಬುಡದಲ್ಲಿ ಸತೋಪ್ರಧಾನವಾಗಲು ತಪಸ್ಸನ್ನು ಮಾಡುತ್ತಿದ್ದಾರೆ. ಬ್ರಹ್ಮಾ ತಂದೆ ಹೇಗೆ ತಪಸ್ಸು ಮಾಡುತ್ತಿದ್ದಾರೆ, ಅದೇ ರೀತಿ ಬ್ರಹ್ಮಾಕುಮಾರ-ಕುಮಾರಿಯರೂ ಸಹ ತಪಸ್ಸನ್ನು ಮಾಡಬೇಕು. ಯಾವ ಬ್ರಹ್ಮಾ ಈಗ ಸತೋಪ್ರಧಾನವಾಗಿದ್ದಾರೆ, ಅವರಲ್ಲಿ ಪರಮಾತ್ಮ ಪ್ರವೇಶ ಮಾಡಿ ತನ್ನ ಪರಿಚಯವನ್ನು ಕೊಡುತ್ತಾರೆ. ಬ್ರಹ್ಮಾ ತಂದೆಗೆ ಹೇಳುವ ಕಾರಣ ಮಕ್ಕಳೂ ಸಹ ಕೇಳುತ್ತಾರೆ. ತಂದೆ ಹಾಗೂ ನೀವು ಮಕ್ಕಳು ಕಲ್ಪ ವೃಕ್ಷದ ಕೆಳಗೆ ದೇವತೆಗಳಾಗಲು ತಪಸ್ಸನ್ನು ಮಾಡುತ್ತಿದ್ದೀರಿ. ಈ ಮಂದಿರ ನಿಮ್ಮದೇ ಜಡ ಜ್ಞಾಪಕಾರ್ಥವಾಗಿದೆ. ಈಗ ಇಂತಹ ಯಾರಾದರೂ ಬುದ್ಧಿವಂತ ಮಕ್ಕಳಿದ್ದು ಈ ಮಂದಿರದ ಸಂಪೂರ್ಣ ಇತಿಹಾಸ ಭೂಗೋಳವನ್ನು ತಿಳಿಸುತ್ತಾ, ಇದು ಸರ್ವ ಶ್ರೇಷ್ಠ ಮಂದಿರವಾಗಿದೆ ಎಂದು ತಿಳಿಸಬೇಕು. ಈ ಮಂದಿರದಲ್ಲಿ ಮಮ್ಮಾ ಹಾಗೂ ಬಾಬಾ ಮತ್ತು ಮಕ್ಕಳು ತಪಸ್ಸನ್ನು ಮಾಡುತ್ತಿದ್ದಾರೆ. ಯಾರು ಭಾರತವನ್ನು ಸ್ವರ್ಗವನ್ನಾಗಿ ಮಾಡಿದರು ಅವರ ಚರಿತ್ರೆ, ಭೂಗೋಳವನ್ನು ವಿದೇಶಿದವರು ಕೇಳಿ ತಿಳಿದುಕೊಂಡಾಗ ಈ ರೀತಿ ಹೇಳುತ್ತಾರೆ-ಇದು ಭಾರತವನ್ನು ಸ್ವರ್ಗವನ್ನಾಗಿ ಮಾಡಿದ ನಮ್ಮ ತಂದೆಯ ಮಂದಿರವಾಗಿದೆ. ಅವರೇ ಈಗ ನಮ್ಮ ಮುಂದೆ ಕುಳಿತ್ತಿದ್ದಾರೆ. ಆದರೆ ಇದು ಯಾರೂ ಸಹ ತಿಳಿದುಕೊಂಡಿಲ್ಲ. ಈ ಎಲ್ಲಾ ಚಿತ್ರಗಳು ಅಂಧಶ್ರದ್ಧೆಯಿಂದ ಮಾಡಿದ್ದಾರೆ. ಇದನ್ನು ಭೂತ ಪೂಜೆ ಎಂದು ಕರೆಯಲಾಗುವುದು. ಇದು ಗೊಂಬೆಗಳ ಪೂಜೆ ಆಗಿದೆ. ಯಾವ ಸಿಕ್ಕ್‌ಧರ್ಮ ಸ್ಥಾಪನೆ ಮಾಡಿದ ಗುರುನಾನಕ್ ಆತ್ಮ ಆಗ ಹೊಸ ಆತ್ಮನಾಗಿದ್ದು ನಿರ್ವಿಕಾರಿಯಾಗಿತ್ತು. ಅವರು ಎಲ್ಲಿಗೆ ಹೋದರು? ಅಗತ್ಯವಾಗಿ ಯಾವುದಾದರು ಶರೀರವನ್ನು ಪಡೆದಿರಬಹುದು. ಈ ರೀತಿ ಪವಿತ್ರ ಆತ್ಮ ಎಂದಿಗೂ ದುಃಖದ ಅನುಭವ ಮಾಡುವುದಿಲ್ಲ. ಪ್ರಾರಂಭದಲ್ಲಿ ಅವರು ಸುಖದ ಅನುಭವ ಮಾಡುತ್ತಾರೆ, ಆಮೇಲೆ ದುಃಖದಲ್ಲಿ ಬರಬೇಕಾಗುತ್ತದೆ. ಅಂತಹ ವಿಕರ್ಮ ಮಾಡದೆ ಇದ್ದಾಗ ದುಃಖವನ್ನು ಏಕೆ ಅನುಭವ ಮಾಡಬೇಕು. ನಾವೂ ಸಹ ಮೊದಲು ಸಂಪೂರ್ಣವಾಗಿದ್ದು ನಂತರ ನಿಧಾನ-ನಿಧಾನವಾಗಿ ಕಲೆಗಳು ಕಡಿಮೆಯಾಗುತ್ತವೆ. ಪ್ರತಿಯೊಬ್ಬ ಮನುಷ್ಯನಿಗೂ ಈ ರೀತಿ ಆಗುತ್ತದೆ. ಹೇ ಪತಿತಪಾವನ ಬಾ ಎಂದು ಕರೆಯುತ್ತಾರೆ, ಅವಶ್ಯವಾಗಿ ಅವರು ಬಂದು ಪತಿತ ಪ್ರಪಂಚದ ವಿನಾಶ ಪಾವನ ಪ್ರಪಂಚದ ಸ್ಥಾಪನೆ ಮಾಡಬೇಕಾಗುವುದು. ಬ್ರಹ್ಮನ ಮೂಲಕ ಸ್ಥಾಪನೆ ಹಾಗೂ ಶಂಕರನ ಮೂಲಕ ವಿನಾಶ, ಈ ರೀತಿ ತಂದೆ ನಮಗೆ ಎಷ್ಟೊಂದು ಸ್ಪಷ್ಟವಾಗಿ ತಿಳಿಸಿಕೊಡುತ್ತಾರೆ. ಈ ಎಲ್ಲಾ ಮಾತುಗಳನ್ನು ದೇವೀ-ದೇವತಾಧರ್ಮದವರು ಮಾತ್ರ

ತಿಳಿದುಕೊಳ್ಳುತ್ತಾರೆ. ಆದುದರಿಂದ ತಂದೆಯು ಭಕ್ತರಿಗೂ ಈ ಜ್ಞಾನ ಕೊಡಬೇಕೆಂದು ತಿಳಿಸುತ್ತಾರೆ. ನಾವೇ ಮೊದಲು ದೇವೀ-ದೇವತಾ ಧರ್ಮದಲ್ಲಿದ್ದು, ಈಗ ಅಸುರರಾಗಿದ್ದೇವೆಂದು ಯಾರಿಗೂ ಗೊತ್ತಿಲ್ಲ. ಲಕ್ಷ್ಮೀ-ನಾರಾಯಣರು ಪೂರ್ತಿ ಎಂಬತ್ತನಾಲ್ಕು ಜನ್ಮಗಳನ್ನು ತೆಗೆದುಕೊಂಡಿದ್ದಾರೆ. ಈಗ ನೀವು ಶೂದ್ರರಿಂದ ಬ್ರಾಹ್ಮಣರಾಗಿದ್ದೀರಿ, ನೀವೇ ನಂತರ ಬ್ರಾಹ್ಮಣರಾಗುತ್ತೀರಿ. ಈ ಮಾತುಗಳು ಕಲ್ಪದ ಹಿಂದೆ ಯಾರ ಬುದ್ಧಿಯಲ್ಲಿ ಧಾರಣೆಯಾಗಿತ್ತು, ಈ ಕಲ್ಪದಲ್ಲಿ ಅವರೇ ಧಾರಣೆ ಮಾಡುತ್ತಾರೆ. ಇಲ್ಲವಾದರೆ ಇಲ್ಲಿಂದ ಹೊರಗೆ ಹೋದ ನಂತರ ಎಲ್ಲವನ್ನು ಮರೆತು ಹೋಗುತ್ತಾರೆ. ಈ ಪುರುಷಾರ್ಥದಲ್ಲಿ ಶ್ರಮ ಪಡಬೇಕಾಗುತ್ತದೆ ಹಾಗೂ ಬೇರೆ ಸತ್ಸಂಗಗಳಲ್ಲಿ ಕಥೆಗಳನ್ನು ಹೇಳಿ ಮನೆಗೆ ಹೋದ ಮೇಲೆ ಮತ್ತೆ ವಿಕಾರಕ್ಕೆ ವಶವಾಗುತ್ತಾರೆ. ತಮ್ಮನ್ನು ಗುರುಗಳ ಅನುಯಾಯಿಗಳೆಂದು ಹೇಳಿಕೊಳ್ಳಲು ಗುರುಗಳನ್ನು ಸಂಪೂರ್ಣವಾಗಿ ಅನುಸರಿಸುವುದಿಲ್ಲ. ಗುರುಗಳೂ ಸಹ ಅವರಿಗೆ ಏನೂ ಸಹ ಹೇಳುವುದಿಲ್ಲ. ಒಂದುವೇಳೆ ಏನಾದರೂ ಹೇಳಿದ್ದರೆ ಒಬ್ಬ ಅನುಯಾಯಿಯೂ ಸಹ ಉಳಿಯುತ್ತಿರಲಿಲ್ಲ, ಆಗ ಗುರುಗಳ ಊಟ ತಿಂಡಿಯ ಪಾಡೇನು! ಗೃಹಸ್ಥಿಗಳ ಮೂಲಕವೇ ಅವರ ಜೀವನ ನಿರ್ವಹಣೆಯಾಗಬೇಕು. ಆದುದರಿಂದ ಅವರು ವಿಕಾರಿಗಳ ಮನೆಯಲ್ಲಿ ಪುನಃ ಜನ್ಮ ತೆಗೆದುಕೊಳ್ಳಬೇಕಾಗುತ್ತದೆ. ದೇವತೆಗಳಂತೂ ಸನ್ಯಾಸ ಸ್ವೀಕಾರ ಮಾಡುವುದಿಲ್ಲ. ತಂದೆ ಬಂದು ಸ್ತ್ರೀ ಪುರುಷರಿಬ್ಬರಿಗೂ ತಿಳಿಸಿಕೊಡುತ್ತಾರೆ. ಮಕ್ಕಳೇ ನೀವು ಸಂಪೂರ್ಣ ಪವಿತ್ರರಾದಾಗ ಸಂಪೂರ್ಣ ರಾಜ್ಯ ಪದವಿಯನ್ನು ಪಡೆಯುವಿರಿ. ಕಡಿಮೆ ಪವಿತ್ರರಾದರೆ ಕಡಿಮೆ ಪದವಿಯನ್ನು ಪಡೆಯುತ್ತೀರಿ. ಆದುದರಿಂದ ತಾಯಿ, ತಂದೆಯನ್ನು ಅನುಸರಿಸಬೇಕು.

ತಂದೆ ತಿಳಿಸುತ್ತಾರೆ - ತಾಯಿ ತಂದೆಯಂತೆ ಪರಿಶ್ರಮ ಪಟ್ಟರೆ ಸಿಂಹಾಸನ ಅಧಿಕಾರಿ ಆಗುತ್ತೀರಿ. ಪವಿತ್ರತೆ ಮುಖ್ಯವಾಗಿದೆ. ಈಗ ದೇಹಾಭಿಮಾನವನ್ನು ಬಿಟ್ಟು ನಾನು ಆತ್ಮನಾಗಿದ್ದೇನೆ, ತಂದೆ ನನ್ನನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದಾರೆ. ಪವಿತ್ರವಾಗುವುದರಿಂದ ಪವಿತ್ರ ಪ್ರಪಂಚದ ಮಾಲೀಕರಾಗುತ್ತೇವೆ. ಕುಂಭ ಮೇಳವೆಂದು ಹೇಳುತ್ತಾರೆ ಆ ತ್ರಿವೇಣಿ ಮೊದಲಾದ ನದಿಗಳ ಮೇಳಕ್ಕೆ ಸಂಗಮವೆಂದು ಹೇಳುತ್ತಾರೆ. ವಾಸ್ತವದಲ್ಲಿ ಇದಾಗಿದೆ ಅನೇಕ ನದಿಗಳ ಹಾಗೂ ಸಾಗಾರದ ಮೇಳ. ತಂದೆ ಜ್ಞಾನ ಸಾಗರನಾಗಿದ್ದು ನೀವೆಲ್ಲರೂ ಜ್ಞಾನ-ನದಿಗಳಾಗಿದ್ದೀರಿ. ತಂದೆ ಹೇಳುತ್ತಾರೆ-ನನ್ನ ಜೊತೆ ಸಂಬಂಧವನ್ನು ಜೋಡಿಸಿದಾಗ ನೀವು ಪತಿತರಿಂದ ಪಾವನರಾಗುತ್ತೀರಿ. ಈ ದೇಹದಿಂದ ನಾವು ದೂರ ಆಗಲೇ ಬೇಕು. ಆದುದರಿಂದ ತಂದೆಯಿಂದ ಆಸ್ತಿ ತೆಗೆದುಕೊಳ್ಳಬೇಕು, ಏಕೆಂದರೆ ಇಡೀ ಕಲ್ಪದಲ್ಲಿ ಈಗ ಮಾತ್ರ ಭಗವಂತನಿಂದ ಭಕ್ತಿಯ ಫಲವನ್ನು ತೆಗೆದುಕೊಳ್ಳಬಹುದು. ಈ ಜ್ಞಾನವನ್ನು ತಿಳಿದುಕೊಳ್ಳದವರಿಗೆ ಹೆಚ್ಚು ಭಕ್ತಿ ಮಾಡಿಲ್ಲವೆಂದು ತಿಳಿದುಕೊಳ್ಳಬೇಕು. ಬಹಳ ಭಕ್ತಿ ಮಾಡುವವರೇ ಬಂದು ರಾಜ್ಯಭಾಗ್ಯವನ್ನು ತೆಗೆದುಕೊಳ್ಳುತ್ತಾರೆ. ತಂದೆ ಎಷ್ಟೊಂದು ಸ್ಪಷ್ಟವಾಗಿ ತಿಳಿಸಿಕೊಡುತ್ತಾರೆ ಹಾಗೂ ಪ್ರಪಂಚದವರ ಬುದ್ಧಿಯಲ್ಲಿ ಕೇವಲ ಶಾಸ್ತ್ರಗಳಷ್ಟೆ ಇದೆ. ಇಲ್ಲಿ ಜ್ಞಾನಸಾಗರ ತಂದೆಯ ಜ್ಞಾನದಿಂದ ನೀವು ಶ್ರೇಷ್ಠರಾಗುತ್ತಿದ್ದೀರಿ. ರಾಜಧಾನಿ ಸ್ಥಾಪನೆ ಮಾಡಬೇಕೆಂದರೆ ಬಹಳ ಪರಿಶ್ರಮವಾಗುತ್ತದೆ. ರುದ್ರ ಜ್ಞಾನ ಯಜ್ಞದಲ್ಲಿ ಅನೇಕ ವಿಘ್ನಗಳು ಬೀಳುತ್ತಿರುತ್ತವೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೇಹಾಭಿಮಾನದಲ್ಲಿ ಬಂದು ಎಂದಿಗೂ ವಿಕಾರಗಳ ಮುಷ್ಟಿಯಲ್ಲಿ ಬಂಧಿಸಿಕೊಳ್ಳಬಾರದು. ಕರ್ಮ ವಿಕರ್ಮವಾಗಬಾರದು, ಆದುದರಿಂದ ಕರ್ಮ ಮಾಡುವ ಮೊದಲು ತಂದೆಯಿಂದ ಸಲಹೆಯನ್ನು ಪಡೆಯಬೇಕು.

2. ತಾಯಿ ತಂದೆಯನ್ನು ಅನುಸರಿಸಬೇಕು. ಶ್ರೇಷ್ಠ ಪದವಿಗಾಗಿ ಸಂಪೂರ್ಣ ಪಾವನರಾಗಲೇಬೇಕು.

ವರದಾನ: ಭಿನ್ನವಾದ (ಸಾಕ್ಷಿ) ಸ್ಥಿತಿಯ ಮೂಲಕ ಪಾಸ್-ವಿತ್-ಆನರ್ ಸರ್ಟಿಫಿಕೇಟ್ ಪ್ರಾಪ್ತಿ ಮಾಡಿಕೊಳ್ಳುವಂತಹ ಅಶರೀರಿ ಭವ.

ಗೌರವಾನ್ವಿತವಾಗಿ ತೇರ್ಗಡೆಯಾಗುವ ಸರ್ಟಿಫಿಕೇಟ್ ಪ್ರಾಪ್ತಿ ಮಾಡಿಕೊಳ್ಳುವುದಕ್ಕಾಗಿ ಮುಖ ಹಾಗೂ ಮನಸ್ಸು, ಇವರೆಡೂ ಶಬ್ಧದಿಂದ ದೂರ ಶಾಂತ ಸ್ವರೂಪದ ಸ್ಥಿತಿಯಲ್ಲಿ ಸ್ಥಿತರಾಗುವ ಅಭ್ಯಾಸವಿರಬೇಕು. ಆತ್ಮವು ಶಾಂತಿ ಸಾಗರನಲ್ಲಿ ಸಮಾವೇಶವಾಗಿ ಬಿಡಲಿ. ಈ ಮಧುರ ಶಾಂತಿಯ ಅನುಭೂತಿಯು ಬಹಳ ಪ್ರಿಯವೆನಿಸುತ್ತದೆ, ತನು ಹಾಗೂ ಮನಸ್ಸಿಗೆ ವಿಶ್ರಾಂತಿ ಸಿಗುತ್ತದೆ. ಅಂತ್ಯದಲ್ಲಿ ಅಶರೀರಿಯಾಗುವ ಈ ಅಭ್ಯಾಸವೇ ಕೆಲಸಕ್ಕೆ ಬರುತ್ತದೆ. ಶರೀರದ ಯಾವುದೇ ಆಟವು ನಡೆಯುತ್ತಿರಲಿ, ಅಶರೀರಿಯಾಗಿದ್ದು ಆತ್ಮವು ತನ್ನ ಶರೀರದ ಪಾತ್ರವನ್ನು ಸಾಕ್ಷಿಯಾಗಿ ನೋಡುತ್ತಿರಲಿ, ಇದೇ ಸ್ಥಿತಿಯು ಅಂತ್ಯದಲ್ಲಿ ವಿಜಯಿಯನ್ನಾಗಿ ಮಾಡುತ್ತದೆ.

ಸ್ಲೋಗನ್: ಸರ್ವ ಗುಣಗಳ ಅಥವಾ ಸರ್ವ ಶಕ್ತಿಗಳ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುವುದಕ್ಕಾಗಿ ಆಜ್ಞಾಕಾರಿಗಳಾಗಿರಿ.

ಮಾತೇಶ್ವರಿಜೀ...ರವರ ಅಮೂಲ್ಯ ಮಹಾವಾಕ್ಯ "ಸೃಷ್ಟಿಯಲ್ಲಿ ಎಂದಿಗೂ ಪ್ರಳಯವಾಗುವುದಿಲ್ಲ"

ಸೃಷ್ಟಿಯಲ್ಲಿ ಪ್ರಳಯವೆಂದಿಗೂ ಆಗುವುದಿಲ್ಲ, ಈಗ ಪ್ರಳಯವಾಗುವುದೆಂದರೆ - ಸೃಷ್ಟಿಯಲ್ಲಿ ಜಲಮಯವಾಗಿ ಬಿಡುವುದು. ಹೊಸ ಸೃಷ್ಟಿಯ ಸ್ಥಾಪನೆಯಾಗುತ್ತದೆ, ಯಾವ ಹೊಸ ಸೃಷ್ಟಿಯ ಆರಂಭವನ್ನು ತೋರಿಸುತ್ತಾರೆ - ದೇವತಾ ಶ್ರೀ ಕೃಷ್ಣನು ಸೃಷ್ಟಿಯ ಮೇಲೆ ಹೇಗೆ ಸೃಷ್ಟಿಯ ಆದಿಯಲ್ಲಿ ಆಲದ ಎಲೆಯ ಮೇಲೆ ಬೆರಳನ್ನು ಚೀಪುತ್ತಾ ಬರುತ್ತಾರೆ, ನಂತರ ಅಂತಹ ಸೃಷ್ಟಿಯು ಉತ್ಪತಿಯ ಆರಂಭವಾಗುತ್ತದೆ. ಈಗ ಇದು ವಿವೇಕ ಉಪಯೋಗಿಸುವ ಮಾತಾಗಿದೆ. ಯಾವಾಗ ನಾವು ಹೇಳುತ್ತೇವೆ - ಪ್ರಳಯವೆಂದರೆ ಜಲಮಯವಾಗುವುದು, ಇದರ ಅರ್ಥವಾಗಿದೆ - ಒಬ್ಬರೂ ಸೃಷ್ಟಿಯಲ್ಲಿ ಇರುವುದಿಲ್ಲ. ಮನುಷ್ಯರು ಪ್ರಳಯದ ಅರ್ಥವನ್ನು ತಿಳಿದಿಲ್ಲ. ಪ್ರಳಯದ ಯಥಾರ್ಥವಾದ ಅರ್ಥವೇನೆಂದರೆ - ಸೃಷ್ಟಿಯಲ್ಲಿ ಇಷ್ಟೆಲ್ಲಾ ಅಪವಿತ್ರತೆಯಿರುವ ಕಾರಣದಿಂದ ಸೃಷ್ಟಿಯು ದುಃಖಿಯಾಗಿಬಿಟ್ಟಿದೆ, ಆ ಅಪವಿತ್ರತೆಯ ಪ್ರಳಯವಾಗಿ ಬಿಡುತ್ತದೆ ಮತ್ತು ಸೃಷ್ಟಿಯು ಪವಿತ್ರವಾಗಿ ಬಿಡುತ್ತದೆ ಅಂದರೆ ತಮೋಗುಣಿ ಸೃಷ್ಟಿಯು ಬದಲಾಗಿ ಸತೋಗುಣಿ ಸೃಷ್ಟಿಯಾಗಿ ಬಿಡುತ್ತದೆ. ಅಂದರೆ ಇದರ ಅರ್ಥವಾಗಿದೆ - ಸೃಷ್ಟಿಯಲ್ಲಿ ಪ್ರಳಯವಾಗುವುದಿಲ್ಲ ಆದರೆ ಸೃಷ್ಟಿಯಲ್ಲಿ ಆಸುರಿ ಅವಗುಣಗಳ ಪ್ರಳಯವಾಗುತ್ತದೆ, ಆದರೆ ಯಾವುದೇ ಮನುಷ್ಯರ ಪ್ರಳಯವಾಗುವುದಿಲ್ಲ. ಒಂದುವೇಳೆ ಸೃಷ್ಟಿಯು ಪ್ರಳಯವಾಗಿ ಬಿಡುತ್ತದೆಯೆಂದರೆ ಗೀತೆಯ ಭಗವಂತನು ಏನು ಹೇಳಿದ್ದಾರೆ - ಸೃಷ್ಟಿಯ ಅನಾದಿ ಹೊರಟು ಬರುತ್ತದೆ, ಹಾಗಾದರೆ ಈ ಭಗವಾನುವಾಚವು ಅಸತ್ಯವೆಂದು ತಿಳಿಯುವುದೇ? ಇಷ್ಟಂತು ಖಂಡಿತವಾಗಿಇದೆ - ಹಳೆಯ ಪ್ರಪಂಚ ಅರ್ಥಾತ್ ತಮೋಗುಣಿ ಸೃಷ್ಟಿಯ ವಿನಾಶವಾಗಿ, ಪುನಃ ಹೊಸ ಸತೋಗುಣಿ ಪ್ರಪಂಚದ ಸ್ಥಾಪನೆಯಾಗುತ್ತದೆ. ಹಾಗಾದರೆ ವಿನಾಶ ಹಾಗೂ ಸ್ಥಾಪನಾ ಕಾರ್ಯವೆರಡೂ ಒಟ್ಟೊಟ್ಟಿಗೆ ನಡೆದು ಬರುತ್ತದೆ. ಸೃಷ್ಟಿಯ ಪ್ರಳಯವಾಗಿ ಬಿಡುತ್ತದೆ ಎಂದು ಹೇಳುವುದಿಲ್ಲ, ಇದೇ ಸೃಷ್ಟಿಯಲ್ಲಿ ಸ್ವರ್ಗ ಹಾಗೂ ನರಕದ ಸ್ಥಾಪನೆಯಾಗುತ್ತದೆ, ಆದರೆ ಯಾವ ಸ್ವರ್ಗವಿರುವುದೋ ಆಗ ನರಕವಿಲ್ಲ, ಯಾವಾಗ ನರಕವಿರುತ್ತದೆಯೋ ಆಗ ಸ್ವರ್ಗವಿರುವುದಿಲ್ಲ. ಎಲ್ಲಿ ಪವಿತ್ರ ದೇವಿ-ದೇವತೆಗಳ ನಿವಾಸ ಸ್ಥಾನವಿದೆಯೋ ಅದು ಸ್ವರ್ಗವೆಂದು ಹಾಗೂ ಎಲ್ಲಿ ಅಪವಿತ್ರ ಮನುಷ್ಯಾತ್ಮರ ನಿವಾಸ ಸ್ಥಾನವಾಗಿದೆಯೋ ಅದು ನರಕವೆಂದು ಹೇಳಲಾಗುತ್ತದೆ. ಅಂದರೆ ಅಪವಿತ್ರತೆಯ ಪ್ರಳಯವಾಗಿಬಿಡುತ್ತದೆ.